ಬಿಜೆಪಿಗೆ ಕ್ರೆಡಿಟ್ ಬರಬಹುದು ಅಂತ ಹಿಂದುಮುಂದು ನೋಡುತ್ತಿರಬಹುದು. ತಾವು ಅಲ್ಲಾದರೂ ಕುಳಿತು ಯೋಚನೆ ಮಾಡಿ. ಅವನಿಗೆ ನೆರವು ಕೊಡುವಂತಹ ಪ್ರಯತ್ನ ಮಾಡಿ. ನಮ್ಮ ಸದಸ್ಯರು ಬಂದು ಇಲ್ಲಿ ಕುಳಿತುಕೊಳ್ಳುತ್ತಾರೆ ಅಧ್ಯಕ್ಷರೆ. ಈ ಸರ್ಕಾರದ ರೈತ ವಿರೋಧ ನೀತಿಯನ್ನು ಜನಕ್ಕೆ ತಿಳಿಸುವುದಕ್ಕೋಸ್ಕರ ಈ ಕ್ಷಣದಿಂದಲೇ ನಾನು ಇಲ್ಲಿಂದ ಹೊರಟ್ಟಿದ್ದೇನೆ. ಮತ್ತೆ ನಾಳೆ ಅಧಿವೇಶನ ಪ್ರಾರಂಭ ಆಗುವಂತಹ ದಿವಸ ಲಕ್ಷಾಂತರ ಜನ ರೈತರ ಜೊತೆ ಬಂದು ವಿಧಾನಸೌಧ ಮುತ್ತಿಗೆ ಹಾಕುತ್ತೇವೆ, ಇಷ್ಟು ಸುಲಭಕ್ಕೆ ನಿಮ್ಮನ್ನು ಬಿಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ ರೈತ ವಿರೋಧಿ ನೀತಿ, ಈ ಸರ್ಕಾರದ ನೀತಿಯನ್ನು ಪ್ರತಿಭಟಿಸುತ್ತಾ ಈ ಕ್ಷಣದಿಂದ ಹೊರಟು ನಾಳೆ ವಿಧಾನಸಭೆ ಅಧಿವೇಶನ ಮುಂದಿನ ತಿಂಗಳು 12ನೇ ತಾರೀಖು ಸೇರುವುದರೊಳಗೆ ರಾಜ್ಯದಲ್ಲೆಲ್ಲಾ ಪ್ರವಾಸ ಮಾಡುತ್ತೇನೆ. ನಿಮ್ಮ ರೈತ ವಿರೋಧ ನೀತಿಯನ್ನು ಜನರಿಗೆ ತಿಳಿಸುತ್ತೇನೆ. ಅಜೀರ್ಣ ಆಗುವಷ್ಟು ಬಹುಮತ ಪಡೆದಿರುವಂತಹ ನೀವು ರೈತ ಸಮೂಹಕ್ಕೆ ಏನು ದ್ರೋಹ ಮಾಡುತ್ತಿದ್ದೀರಿ ಅದನ್ನು ಜನತೆಗೆ ತಿಳಿಸುವ ದೃಷ್ಟಿಯಿಂದ ನಾನು ಇಲ್ಲಿಂದ ಹೊರಡುತ್ತಿದ್ದೇನೆ. ನಮಸ್ಕಾರ ಅಧ್ಯಕ್ಷರೆ, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ.

10-30 a.m.

ರೈತರ ಕೂಗು, ನೋವು ತಮಗೂ ಗೊತ್ತಿದೆ. ಬಹುಶಃ ಇಲ್ಲಿ ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆಯೇ ಹೊರತು, ಇದು ಪ್ರಚಾರಕ್ಕಾಗಿ ಮಾಡಿದ್ದು ಎಂಬ ದೃಷ್ಟಿಯಲ್ಲ ಎನ್ನುವ ಮಾತನ್ನು ಮತ್ತೊಮ್ಮೆ ತಮಗೆ ತಿಳಿಸುತ್ತಾ, ವಿರೋಧ ಪಕ್ಷದ ನಾಯಕರೂ ಈ ದಿಸೆಯಲ್ಲಿ ನನ್ನ ಜೊತೆಗೆ ನಿಲ್ಲುತ್ತಾರೆ ಅಂದುಕೊಂಡಿದ್ದೇನೆ. ಅವರೂ ಕೂಡ ಸಲಹೆ ಕೊಟ್ಟಿದ್ದಾರೆ. ಮಾನ್ಯ ಸಿಂಧ್ಯರವರೂ ಕೂಡ ಹೇಳಿದರು. ಕೊನೆಯ ಪಕ್ಷ, ನ್ಯಾಯವಾದ ಬೇಡಿಕೆಗಳು ಈಡೇರಬೇಕೆಂದು, ಯಾವ ಮಟ್ಟದ ಹೋರಾಟ ಮಾಡಬೇಕಾಗಿತ್ತೋ, ಅದನ್ನು ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಬಹುಶಃ ಅವರಿಗೆ ಅನಿಸಿರಬಹುದು, ಯಡಿಯೂರಪ್ಪನವರು ರೈತ ಎಂದು ಕೂಗುತ್ತಿದ್ದಾರೆ, ಬಿ.ಜೆ.ಪಿ. ರೈತ ಎಂದು ಕೂಗುತ್ತಿದೆ, ಈ ಸಮಯದಲ್ಲಿ ನೆರವು ಸಿಕ್ಕಿದರೆ, ಅವರಿಗೇ ಲಾಭವಾಗುತ್ತದೆ ಎನ್ನುವ ಭಯ ಇದೆಯೋ ಏನೋ ಗೊತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ಬಿ.ಜೆ.ಪಿ. ಮತ್ತು ಜನತಾ ದಳ ಭಾಗ ಮಾಡುವುದು ಬೇಕಾಗಿಲ್ಲ, ರೈತರ ಬಗ್ಗೆ ಎಲ್ಲರಿಗೂ ಕಳಕಳಿ ಇದೆ, ರೈತರ ಬಗ್ಗೆ ಎಲ್ಲರಿಗೂ ಅಭಿಮಾನ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ವಾಟಾಳ್ ನಾಗರಾಜರು ಮತ್ತು ಇತರೆ ಸದಸ್ಯರು ಹೇಳಿರುವುದು ಸರಿಯಾಗಿದೆ. ಜನತಾ ದಳದವರಿಗೆ, ಮಂಡ್ಯಾದಲ್ಲಿ ಯಡಿಯೂರಪ್ಪನವರ ಸಾರ್ವಜನಿಕ ಸಭೆ ಇದೆಯೆಂದು ಗೊತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನನಗೆ ವಾಟಾಳ್ ನಾಗರಾಜರ ಬಗ್ಗೆ ಗೌರವ ಇದೆ, ಸಿಂಧ್ಯರವರ ಬಗ್ಗೆ ಗೌರವ ಇದೆ, ದೇಶಪಾಂಡೆಯವರ ಬಗ್ಗೆ ಗೌರವ ಇದೆ, ಇವತ್ತು ಈ ಕಡೆ ಅಧಿಕೃತ ವಿರೋಧಪಕ್ಷದವರಾಗಿ ರೈತರಿಗೆ ನೆರವು ಕೊಡಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ಅತ್ಯಂತ ಬಹುಮತ ಇರುವಂಥ ಕಾಂಗ್ರೆಸ್ ಪಕ್ಷ ಜನರಿಗೆ ದ್ರೋಹ ಮಾಡುತ್ತಿದೆ, ಇದನ್ನು ತಿಳಿಸುವುದಕ್ಕೋಸ್ಕರ ಇವತ್ತಿನಿಂದ ರೈತರ ಜೊತೆ ಹಳ್ಳಿ ಹಳ್ಳಿಗೆ ಹೋಗುತ್ತಿದ್ದೇನೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು:- ಬನ್ನಿಕೋಡ್‌ರವರೇ, ನೀವೇ ಅವರನ್ನು ಪುನಃ ವಾಪಸ್ ಕರೆದಿರಿ.

ಶ್ರೀ ವಾಟಾಳ್ ನಾಗರಾಜ್:- ಯಡಿಯೂರಪ್ಪನವರು ಹೊರಗಡೆ ಹೋಗುವುದು, ಇಲ್ಲಿ ಈಶ್ವರಪ್ಪನವರು ಕುಳಿತುಕೊಳ್ಳುವುದು, ಇದೇನೋ ನನಗೆ ಅರ್ಥವಾಗುವುದಿಲ್ಲ. ಇದು ಸರಿಯಲ್ಲ.